ಉ) ಸುಳ್ಳು ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದರೆ ಮಂಜೂರ ಮಾಡಲಾಗುವುದಿಲ್ಲ.

ಊ) ಅನರ್ಹವೆನಿಸಿದ ಪ್ರಕರಣಗಳಲ್ಲಿ ಈಗಾಗಲೇ ಮಾಸಾಶನವನ್ನು ರದ್ದುಗೊಳಿಸಲಾಗಿದೆ

ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಹಣದ ಲೂಟಿ.

226 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಮಾಸಾಶನ ಕೊಡಿಸುವುದಾಗಿ ಮುಗ್ಧ ಜನರಿಂದ ದಲ್ಲಾಳಿಗಳು ಹಣ ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ವ್ಯಕ್ತಿ ತನ್ನ ಜೊತೆ ಜೈಲಿನಲ್ಲಿದ್ದ ಎಂದು ಕೆಲವು ಜನರು ಕೊಡುತ್ತಿರುವ ಸುಳ್ಳು ಸರ್ಟಿಫಿಕೇಟನ್ನೇ ಆಧರಿಸಿ ಮಾಸಾಶನ ಮಂಜೂರಾತಿ ಮಾಡುವ ಕ್ರಮ ಸರ್ಕಾರದಲ್ಲಿರುವುದೇ;

ಇ) ಮಾಸಾಶನ ಕೊಡಿಸುವ ಆಸೆ ಹುಟ್ಟಿಸಿ ಅನೇಕ ವಿಜೆಂಟರು ಮುಗ್ಧ ಜನರಿಂದ ಹಣ ಲೂಟಿ ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಯೋಚಿಸಿದೆಯೇ;

ಈ) ಬಂದಿರುವ ಅಂತಹ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಕೇವಲ ಅರ್ಹ ವ್ಯಕ್ತಿಗಳಿಗೆ ಮಾತ್ರ ಮಂಜೂರಾತಿ ನೀಡುವಂತೆ ಸರ್ಕಾರ ಆದೇಶ ನೀಡುತ್ತಿದೆಯೇ ;

ಉ) ಈ ಮಾಸಾಶನವನ್ನು ರದ್ದುಮಾಡುವ ಮೂಲಕ ಹಣದ ಲೂಟಿಯನ್ನು ತಪ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಇಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಅರ್ಹ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾತ್ರ ಮಾಸಾಶನ ಮಂಜೂರ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ವಿಧಾನ ಸೌಧ ಒಳ ಆವರಣದಲ್ಲಿ ಲಕ್ಷಾಂತರ ರೂ ಬೆಲೆ ಬಾಳುವ ಪೀಠೋಪಕರಣ ಬಿದ್ದಿರುವುದರ ಬಗ್ಗೆ

228- ಶ್ರೀ ಕೆ.ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದ ಒಳ ಆವರಣದಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ಪೀಠೋಪಕರಣಗಳು ಬಿಸಿಲು ಮಳೆಯಿಂದ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅವುಗಳನ್ನು ಬಿಸಿಲು ಮಳೆಯಿಂದ ರಕ್ಷಿಸುವ ಕ್ರಮವನ್ನು ಸರ್ಕಾ ಕೈಗೊಳ್ಳುವುದೇ?

ಇ) ಇನ್ನು ಮುಂದೆ ಹೊಸ ಪೀಠೋಪಕರಣಗಳನ್ನು ಖರೀದಿಸುವ ಬದಲು ಈ ಪೀಠೋಪರಣಗಳನ್ನೇ ದುರಸ್ಥಿಪಡಿಸಿ ಸದುಪಯೋಗಪಡಿಸಿಕೊಳ್ಳುವಂ ಸಂಬಂಧಪಟ್ಟವರಿಗೆ ಸರ್ಕಾರ ಆದೇಶಿಸುವುದೇ?